# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ –೧೫೬<br>Volume - 156 | ಬೆಂಗಳೂರು, ಸೋಮವಾರ, ೨೯, ಮಾರ್ಚ್, ೨೦೨೧ (ಚೈತ್ರ, ೦೮, ಶಕವರ್ಷ, ೧೯೪೩)<br>BENGALURU, MONDAY, 29, MARCH, 2021 (CHAITHRA, 08, SHAKAVARSHA, 1943) | ಸಂಚಿಕೆ ೪೮<br>Issue 48 |
|---|---|---|

## ಭಾಗ ೫

## ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

### ಕರ್ನಾಟಕ ಸರ್ಕಾರ

ಸಂಖ್ಯೆ: ಆನಾಸ/60/ಸಲಫ/2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:29-03-2021

### ಅಧಿಸೂಚನೆ

**ವಿಷಯ: ಕರ್ನಾಟಕ ರಾಜ್ಯದಲ್ಲಿರುವ ವಿವಿಧ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳ ಅಧ್ಯಕ್ಷರು, ಸದಸ್ಯರು ಮತ್ತು ಮಹಿಳಾ ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ**

– – – –

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಈ ಹಿಂದೆ ಹೊರಡಿಸಲಾಗಿದ್ದ ಅಧಿಸೂಚನೆ ಸಂಖ್ಯೆ. ಕರಾಆ/ಆಡಳಿತ/09/2020 ದಿನಾಂಕ 11.05.2020ನ್ನು ರದ್ದುಪಡಿಸಿ ಕರ್ನಾಟಕ ರಾಜ್ಯದ ವಿವಿಧ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಲ್ಲಿನ ಅಧ್ಯಕ್ಷರು, ಸದಸ್ಯರು ಹಾಗೂ ಮಹಿಳಾ ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಅರ್ಹರಿರುವಂತಹ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಪ್ರಸ್ತುತ ಖಾಲಿಯಿರುವ ಹಾಗೂ ದಿನಾಂಕ 31.08.2021ರವರೆಗೆ ಖಾಲಿಯಾಗುತ್ತಿರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ.

**1. ಒಟ್ಟು ಹುದ್ದೆಗಳು**

| ಕ್ರ.ಸಂ. | ಹುದ್ದೆ ವಿವರ | ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳು | ಹುದ್ದೆಗಳ ಸಂಖ್ಯೆ |
|---|---|---|---|
| 01 | **ಅಧ್ಯಕ್ಷರು** | (1) ಬೆಂಗಳೂರು ನಗರ 2ನೇ ಹೆಚ್ಚುವರಿ,<br>(2) ಬೆಂಗಳೂರು ನಗರ 3ನೇ ಹೆಚ್ಚುವರಿ,<br>(3) ಬೆಂಗಳೂರು ನಗರ 4ನೇ ಹೆಚ್ಚುವರಿ, (4) ಶಿವಮೊಗ್ಗ,<br>(5) ಹಾಸನ, (6) ಬೆಳಗಾವಿ, (7) ಯಾದಗಿರಿ, (8) ಹಾವೇರಿ,<br>(9) ತುಮಕೂರು, (10) ಕಲಬುರ್ಗಿ, (11) ಮಂಡ್ಯ, (12) ರಾಯಚೂರು,<br>(13) ಕೊಪ್ಪಳ, (14) ಗದಗ್, (15) ಬಾಗಲಕೋಟೆ, (16) ಉಡುಪಿ,<br>(17) ಬಳ್ಳಾರಿ, (18) ಚಿತ್ರದುರ್ಗ, (19) ದಕ್ಷಿಣ ಕನ್ನಡ, (20) ಕೋಲಾರ,<br>(21) ಚಿಕ್ಕಮಗಳೂರು (22) ಚಾಮರಾಜನಗರ. | 22 |

| | | | |
|---|---|---|---|
| 02 | **ಸದಸ್ಯರು** | (1) ಬೆಂಗಳೂರು ನಗರ, (2) ಬೆಂಗಳೂರು ನಗರ 2ನೇ ಹೆಚ್ಚುವರಿ, (3) ಬೆಂಗಳೂರು ನಗರ 3ನೇ ಹೆಚ್ಚುವರಿ, (4) ಬೆಂಗಳೂರು ನಗರ 4ನೇ ಹೆಚ್ಚುವರಿ, (5) ಶಿವಮೊಗ್ಗ, (6) ಬಳ್ಳಾರಿ, (7) ಮೈಸೂರು, (8) ಹಾವೇರಿ, (9) ಬೀದರ್, (10) ಚಾಮರಾಜನಗರ, (11) ಚಿಕ್ಕಮಗಳೂರು, (12) ದಾವಣಗೆರೆ, (13) ಗದಗ್, (14) ಕೊಪ್ಪಳ, (15) ಯಾದಗಿರಿ, (16) ವಿಜಯಪುರ (17) ಕಲಬುರ್ಗಿ. | 17 |
| 03 | **ಮಹಿಳಾ ಸದಸ್ಯರು** | (1) ಬೆಂಗಳೂರು ನಗರ 2ನೇ ಹೆಚ್ಚುವರಿ, (2) ಬೆಂಗಳೂರು ನಗರ 3ನೇ ಹೆಚ್ಚುವರಿ, (3) ಬೆಂಗಳೂರು ನಗರ 4ನೇ ಹೆಚ್ಚುವರಿ, (4) ದಕ್ಷಿಣ ಕನ್ನಡ, (5) ಹಾಸನ, (6) ಬೆಳಗಾವಿ, (7) ಹಾವೇರಿ, (8) ಬಾಗಲಕೋಟೆ, (9) ಚಾಮರಾಜನಗರ, (10) ಚಿಕ್ಕಮಗಳೂರು, (11) ದಾವಣಗೆರೆ, (12) ಮಂಡ್ಯ, (13) ಗದಗ್, (14) ಕೊಪ್ಪಳ, (15) ಯಾದಗಿರಿ, (16) ಕೋಲಾರ (17) ಉಡುಪಿ. | 17 |

2. **ನೇಮಕಾತಿ ವಿಧಾನ**

ಗ್ರಾಹಕ ಸಂರಕ್ಷಣಾ (ರಾಜ್ಯ ಆಯೋಗಗಳ ಹಾಗೂ ಜಿಲ್ಲಾ ಆಯೋಗಗಳ ಅಧ್ಯಕ್ಷರ ಹಾಗೂ ಸದಸ್ಯರ ನೇಮಕಾತಿಗೆ ವಿದ್ಯಾರ್ಹತೆ, ನೇಮಕಾತಿ ಕ್ರಮ, ನೇಮಕಾತಿ ವಿಧಾನ, ಕಛೇರಿ ಸೇವಾವಧಿ, ರಾಜೀನಾಮೆ ಹಾಗೂ ವಜಾಗೊಳಿಸುವಿಕೆ) ನಿಯಮಗಳು, 2020ರ ಅನುಸಾರ ಅಧ್ಯಕ್ಷರ ಹಾಗೂ ಸದಸ್ಯರುಗಳ ಆಯ್ಕೆಯನ್ನು ಮಾಡಲಾಗುವುದು.

3. **ವಿದ್ಯಾರ್ಹತೆ / ಅನುಭವ / ವಯೋಮಿತಿ**

| | | |
|---|---|---|
| ಅಧ್ಯಕ್ಷರು | ಯಾವ ವ್ಯಕ್ತಿ / ಅಭ್ಯರ್ಥಿ ಈ ಕೆಳಕಂಡ ಅರ್ಹತೆಯನ್ನು ಹೊಂದಿಲ್ಲದಿದ್ದರೆ ನೇಮಕಾತಿಗೆ ಅರ್ಹರಿರುವುದಿಲ್ಲ. ಜಿಲ್ಲಾ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಿರಬೇಕು ಅಥವಾ ಜಿಲ್ಲಾ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿರಬೇಕು ಅಥವಾ ಜಿಲ್ಲಾ ನ್ಯಾಯಾಧೀಶರಾಗಲು ಅರ್ಹತೆಯನ್ನು ಹೊಂದಿರುವಂತಹವರಾಗಿರಬೇಕು. | |
| ಸದಸ್ಯರು/ ಮಹಿಳಾ ಸದಸ್ಯರು | ಈ ಕೆಳಕಂಡ ಅರ್ಹತೆಯನ್ನು ಹೊಂದಿಲ್ಲದ ಯಾವುದೇ ವ್ಯಕ್ತಿಯು ಸದಸ್ಯರಾಗಲು ಅರ್ಹರಿರುವುದಿಲ್ಲ | |
| | ಅ | 35 ವರ್ಷಗಳ ವಯಸ್ಸಿಗಿಂತ ಕಡಿಮೆ ಇರಬಾರದು |
| | ಆ | ಯಾವುದಾದರೂ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು |
| | ಇ | ಅಭ್ಯರ್ಥಿಯು ನ್ಯಾಯ, ನಿಷ್ಠೆ ಹಾಗೂ ಘನತೆಯನ್ನು ಹೊಂದಿರುವುದರ ಜೊತೆಗೆ ಗ್ರಾಹಕರ ವ್ಯವಹಾರಗಳು, ಕಾನೂನು, ಸಾರ್ವಜನಿಕ ವ್ಯವಹಾರಗಳು, ಆಡಳಿತ, ಆರ್ಥಿಕ, ವಾಣಿಜ್ಯ, ಕೈಗಾರಿಕೆ, ಹಣಕಾಸು, ನಿರ್ವಹಣೆ, ಇಂಜಿನಿಯರಿಂಗ್, ತಾಂತ್ರಿಕ, ಸಾರ್ವಜನಿಕ ಆರೋಗ್ಯ ಅಥವಾ ಔಷಧ ಕ್ಷೇತ್ರಗಳಲ್ಲಿ 15 ವರ್ಷಗಳ ಕಡಿಮೆಯಿಲ್ಲದ ವಿಶೇಷ ಜ್ಞಾನ ಮತ್ತು ವೃತ್ತಿ ಅನುಭವವನ್ನು ಹೊಂದಿರತಕ್ಕದ್ದು. |

3. **ಸೇವಾವಧಿ:**

4 ವರ್ಷಗಳು ಅಥವಾ 65 ವರ್ಷಗಳ ವಯೋಮಾನದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ

4. **ಅಧ್ಯಕ್ಷರ ಹಾಗೂ ಸದಸ್ಯರುಗಳ ವೇತನ-ಭತ್ಯೆಗಳು:**

ಕರ್ನಾಟಕ ಗ್ರಾಹಕ ಸಂರಕ್ಷಣಾ ನಿಯಮಗಳು, 2020 ಹಾಗೂ / ಅಥವಾ ಕಾಲಕಾಲಕ್ಕೆ ರಾಜ್ಯ ಸರ್ಕಾರವು ತತ್ಸಂಬಂಧದ ನಿಯಮಗಳ ಸಂಬಂಧ ಹೊರಡಿಸುವ ಆದೇಶ / ಅಧಿಸೂಚನೆಯ ಅನುಸಾರ ಅಧ್ಯಕ್ಷರ ಹಾಗೂ ಸದಸ್ಯರುಗಳ ವೇತನ-ಭತ್ಯೆಯನ್ನು ನಿಗದಿಪಡಿಸಲಾಗುತ್ತದೆ.

5. **ಆಯ್ಕೆ ವಿಧಾನ:**

ಆಯ್ಕೆ ವಿಧಾನವು ಈ ಕೆಳಕಂಡ ಎರಡು ಹಂತಗಳನ್ನು ಒಳಗೊಂಡಿರುತ್ತದೆ.

I. **ವಸ್ತುನಿಷ್ಠ ಮಾದರಿಯ ಪರೀಕ್ಷೆ**

ವಸ್ತುನಿಷ್ಠ ಮಾದರಿಯಲ್ಲಿ (Objective type test) 50 ಅಂಕಗಳ ಪರೀಕ್ಷೆಯನ್ನು ನಡೆಸಲಾಗುವುದು. ಪರೀಕ್ಷೆಯ ವಿಷಯವು ಈ ಕೆಳಕಂಡಂತಿರುತ್ತದೆ.

**ಭಾಗ–ಎ:** 1. ಗ್ರಾಹಕ ಸಂರಕ್ಷಣಾ ಕಾಯ್ದೆ, 2019 ಹಾಗೂ ತತ್ಸಂಬಂಧದ ಗ್ರಾಹಕ ಕಾನೂನು
2. ಭಾರತದ ಸಂವಿಧಾನ

**ಭಾಗ–ಬಿ:** ಸಾಮಾನ್ಯ ಪ್ರಕ್ರಿಯೆ ಕಾನೂನು (General Procedural Law) ಅಂದರೆ ಸಿವಿಲ್ ಪ್ರಕ್ರಿಯಾ ಸಂಹಿತೆ (Code of Civil Procedure), 1908 ಹಾಗೂ ಅಪರಾಧಿಕ ಪ್ರಕ್ರಿಯಾ ಸಂಹಿತೆ (Code of Criminal Procedure), 1973

**ಭಾಗ–ಸಿ:** ಸಾಮಾನ್ಯ ಜ್ಞಾನ ಹಾಗೂ ಪ್ರಚಲಿತ ವಿದ್ಯಮಾನಗಳು

ಮೌಖಿಕ ಸಂದರ್ಶನಕ್ಕೆ ಅಭ್ಯರ್ಥಿಗಳು ಅರ್ಹತೆ ಪಡೆಯಲು ಅಧ್ಯಕ್ಷರ ಹುದ್ದೆಗೆ ಸಂಬಂಧಿಸಿದಂತೆ ಕನಿಷ್ಠ 30 ಅಂಕಗಳನ್ನು ಹಾಗೂ ಸದಸ್ಯರ ಹುದ್ದೆಗೆ ಸಂಬಂಧಿಸಿದಂತೆ ಕನಿಷ್ಠ 25 ಅಂಕಗಳನ್ನು ಪಡೆಯಲೇಬೇಕಾಗಿರುತ್ತದೆ.

ವಸ್ತುನಿಷ್ಠ ಮಾದರಿಯ ಪ್ರಶ್ನೆ ಪತ್ರಿಕೆಯು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿರುತ್ತದೆ ಹಾಗೂ ಪರೀಕ್ಷೆಗೆ ನಿಗದಿಪಡಿಸಿರುವ ಅವಧಿ ಒಂದು ಘಂಟೆ. ಪರೀಕ್ಷೆಯಲ್ಲಿ ಅರ್ಹ ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳನ್ನು ಮಾತ್ರ ಮೌಖಿಕ ಸಂದರ್ಶನದ ಅಭ್ಯರ್ಥಿಗಳ ಕಿರುಪಟ್ಟಿಗೆ ಪರಿಗಣಿಸಲಾಗುತ್ತದೆ.

II. **ಮೌಖಿಕ ಸಂದರ್ಶನ (ಗರಿಷ್ಠ 30 ಅಂಕಗಳು)**

| | |
|---|---|
| 1. ಶೈಕ್ಷಣಿಕ ವಿದ್ಯಾರ್ಹತೆ | 10 ಅಂಕಗಳು |
| 2. ವೃತ್ತಿ ಅನುಭವ | 10 ಅಂಕಗಳು |
| 3. ವ್ಯಕ್ತಿತ್ವ / ಸೂಕ್ತತೆ | 10 ಅಂಕಗಳು |

ಮೌಖಿಕ ಸಂದರ್ಶನದಲ್ಲಿ ಗಳಿಸಿದ ಅಂಕಗಳ ಆಧಾರದ ಮೇರೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಅಭ್ಯರ್ಥಿಗಳು ಆಯ್ಕೆಗೆ ಅರ್ಹತೆ ಹೊಂದಲು ಆಯಾ ಹುದ್ದೆಗಳಿಗೆ ಸಂಬಂಧಿಸಿದಂತೆ ಒಟ್ಟು 30 ಅಂಕಗಳಲ್ಲಿ ಕನಿಷ್ಠ 15 ಅಂಕಗಳನ್ನು ಪಡೆಯತಕ್ಕದ್ದು.

6. **ಅರ್ಜಿ ಸಲ್ಲಿಸುವ ವಿಧಾನ:**

ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಈ ಕೆಳಕಂಡ ಜಾಲತಾಣಗಳ ಮೂಲಕ ಸಲ್ಲಿಸಬಹುದಾಗಿರುತ್ತದೆ.
https://aaharasachivalaya.karnataka.gov.in / https://kscdrc.kar.nic.in, https://kscdrc.karnataka.gov.in ಅಥವಾ ಸೇವಾ ಸಿಂಧು ಜಾಲತಾಣ https://sevasindhu.karnataka.gov.in

7. **ಅರ್ಜಿ ಶುಲ್ಕ**

ಅಭ್ಯರ್ಥಿಗಳು ರೂ.250–00ಗಳ ಅರ್ಜಿ ಶುಲ್ಕವನ್ನು ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಕಲ್ಪಿಸಿರುವಂತಹ ವಿಧಾನದಲ್ಲಿ ಪಾವತಿಸತಕ್ಕದ್ದು. ಒಂದು ವೇಳೆ ಅಭ್ಯರ್ಥಿಗಳು ಈ ಹಿಂದೆ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಹೊರಡಿಸಿದ್ದ ಅಧಿಸೂಚನೆ ಸಂಖ್ಯೆ ಕರಾಆ/ಆಡಳಿತ/09/2020 ದಿನಾಂಕ 11.05.2020ರ

ಅನುಸಾರ ಅರ್ಜಿ ಸಲ್ಲಿಸಿ ಅರ್ಜಿ ಶುಲ್ಕವನ್ನು ಪಾವತಿ ಮಾಡಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ "ವಿನಾಯಿತಿ" ಎಂದು ಇರುವ ಕಡೆ ಕ್ಲಿಕ್ ಮಾಡಿ ಈಗಾಗಲೇ ಅರ್ಜಿ ಶುಲ್ಕ ಪಾವತಿ ಮಾಡಿರುವ ಬಗ್ಗೆ ವಿವರವನ್ನು ನಮೂದಿಸತಕ್ಕದ್ದು

8. **ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧಿಸೂಚನೆ ಸಂಖ್ಯೆ ಕರಾಆ/ಆಡಳಿತ/09/2020 ದಿನಾಂಕ 11.05.2020ರ ಅನುಸಾರ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಆಯಾ ಹುದ್ದೆಗಳಿಗೆ ಹೊಸದಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಸದರಿ ಅಧಿಸೂಚನೆಯ ಮೇರೆಗೆ ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.**

9. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಃ**

ಅಭ್ಯರ್ಥಿಗಳು ದಿನಾಂಕ 30.04.2021 ರಾತ್ರಿ 11.59ರವರೆಗೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.

10. **ಇತರೆ ಷರತ್ತುಗಳು / ಸೂಚನೆಗಳು**

- ಅಭ್ಯರ್ಥಿಗಳು ಯಾವುದೇ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದರೂ, ಆಯಾ ಹುದ್ದೆಗಳನ್ನು ಅರ್ಜಿಯಲ್ಲಿ ನಮೂದಿಸಿರುವಂತೆ ಆಯಾ ಹುದ್ದೆಗಳ ಎದುರಿಗೆ ಗುರುತು ಮಾಡಿ ಒಂದೇ ಅರ್ಜಿಯನ್ನು ಮಾತ್ರ ಸಲ್ಲಿಸತಕ್ಕದ್ದು. ಪ್ರತೀ ಹುದ್ದೆಗೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
- ಅರ್ಜಿಗಳನ್ನು ನೇರವಾಗಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಂಬಂಧಪಟ್ಟ ಇಲಾಖೆಗೆ / ರಾಜ್ಯ ಗ್ರಾಹಕರ ಆಯೋಗಕ್ಕೆ / ಆಯ್ಕೆ ಸಮಿತಿಗೆ ಸಲ್ಲಿಸಿದಲ್ಲಿ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.
- ಅಭ್ಯರ್ಥಿಗಳು ಯಾವುದೇ ಹುದ್ದೆಗೆ ಆಯ್ಕೆಗೊಂಡಲ್ಲಿ ಕರ್ನಾಟಕದ ಯಾವುದೇ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಸೇವೆ ಸಲ್ಲಿಸಲು ಸಿದ್ಧರಿರತಕ್ಕದ್ದು.

ಆಯ್ಕೆ ಸಮಿತಿ ಆದೇಶದ ಮೇರೆಗೆ,

**ಸದಸ್ಯರು-ಸಂಚಾಲಕರು,**
ಆಯ್ಕೆ ಸಮಿತಿ ಹಾಗೂ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು
ಮಾಪನ ಶಾಸ್ತ್ರ ಇಲಾಖೆ,
ವಿಕಾಸ ಸೌಧ, ಬೆಂಗಳೂರು

## GOVERNMENT OF KARNATAKA

No. FCS 60 SLF 2020

Karnataka Government Secretariat,
Vikasa Soudha,
Bengaluru, dated: 29.03.2021

## NOTIFICATION

**Sub:** Filling up of the post of Presidents, Members and Woman Members of District Consumer Disputes Redressal Commissions in the State of Karnataka

**Last date for submission of Application through Online is 30.04.2021 till 11.59 PM.**

~*~*~

In supersession of the earlier Notification bearing No.KSC/ADM/09/2020 dated 11.05.2020 issued by the Karnataka State Consumer Disputes Redressal Commission, Bengaluru, applications are invited through online from the eligible

candidates who are qualified as on the last date fixed for submission of applications for filling-up of the post of President, Member and Woman Member of various District Consumer Disputes Redressal Commissions in the State of Karnataka. The details of present vacant posts and the posts falling vacant till 31.08.2021 are as follows:

| **Sl. No.** | **Name of Post** | **Name of the District Consumer Disputes Redressal Commissions** | **No. of posts** |
|---|---|---|---|
| 1 | President | (1) Bengaluru Urban 2nd Addl., (2) Bengaluru Urban 3rd Addl., (3) Bengaluru Urban 4th Addl., (4) Shivamogga, (5) Hassan, (6) Belagavi, (7) Yadagiri, (8) Haveri, (9) Tumakuru, (10) Kalaburgi, (11) Mandya, (12) Raichur, (13) Koppal, (14) Gadag, (15) Bagalkot, (16) Udupi, (17) Ballari, (18) Chitradurga, (19) Dakshina Kannada, (20) Kolar, (21) Chikkamagaluru (22) Chamarajanagar | 22 |
| 2 | Member | (1) Bengaluru Urban, (2) Bengaluru Urban 2nd Addl, (3) Bengaluru Urban 3rd Addl, (4) Bengaluru Urban 4th Addl., (5) Shivamogga, (6) Ballari, (7) Mysuru, (8) Haveri, (9) Bidar, (10) Chamarajanagar, (11) Chikkamagaluru, (12) Davanagere, (13) Gadag, (14) Koppal, (15) Yadagiri, (16) Vijayapura (17) Kalaburgi | 17 |
| 3 | Woman Member | (1) Bengaluru Urban 2nd Addl, (2) Bengaluru Urban 3rd Addl, (3) Bengaluru Urban 4th Addl, (4) Dakshina Kannada, (5) Hassan, (6) Belagavi, (7) Haveri, (8) Bagalkot, (9) Chamarajanagar, (10) Chikkamagaluru, (11) Davanagere, (12) Mandya, (13) Gadag, (14) Koppal, (15) Yadagiri, (16) Kolar (17) Udupi | 17 |

1. **Method of Recruitment:**

The selection to the post of President and Members will be made as per the Consumer Protection (Qualification for Appointment, Method of Recruitment, Procedure of Appointment, Term of Office, Resignation and Removal of the President and Members of the State Commission and District Commission) Rules, 2020.

2. **<u>Qualification / Experience / Age</u>:**

<table>
<tr><td>President</td><td colspan="2">A person shall not be qualified for appointment as President, unless he/she is, or has been, or is qualified to be a District Judge.</td></tr>
<tr><td rowspan="4">Member/ Woman Member</td><td colspan="2">A person shall not be qualified for appointment as member unless he/she –</td></tr>
<tr><td>A</td><td>is not less than thirty five years of age;</td></tr>
<tr><td>B</td><td>possesses a bachelor's degree from a recognized university; and</td></tr>
<tr><td>C</td><td>is a person of ability, integrity and standing, and having special knowledge and professional experience of not less than fifteen years in consumer affairs, law, public affairs, administration, economics, commerce, industry, finance, management, engineering, technology, public health or medicine .</td></tr>
</table>

**3. <u>Term of office</u>:**

The President and every Member of the District Commission shall hold the office for a term of four years or up to the age of sixty-five years, whichever is earlier.

**4. <u>Salary and Allowances of the President and Members</u>:**

The salary and allowances of President and Members shall be as per the Karnataka Consumer Protection Rules, 2020 and/or related orders/Notifications to be issued under the said Rules from time to time by the State of Karnataka.

**5. <u>Method of Selection:</u>**

**The method of selection shall consist of two stages as follows:**

**<u>I. OBJECTIVE TYPE TEST</u>**

An objective type test for 50 marks. Syllabi for the said test is as follows:

**PART – A:**
1. The Consumer Protection Act, 2019 and allied Consumer Laws,
2. The Constitution of India.

**PART – B:** General Procedural Law i.e., Code of Civil Procedure, 1908 and Code of Criminal Procedure, 1973.

**PART – C:** General Knowledge and Current Affairs.

The minimum marks to be secured by the candidates to be eligible for viva-voce / interview shall be 30 marks for the candidates, who have applied for the post of President and 25 marks for the candidates, who have applied for the post of Member.

The question paper of the objective type test shall be in both Kannada and English languages and the duration of the test shall be one hour. The marks secured by the successful candidates shall be considered only to short-list the candidates for viva-voce/interview.

**II. VIVA-VOCE / INTERVIEW (Maximum Marks 30)**

| | |
|---|---|
| 1. Educational Qualification | 10 Marks |
| 2. Work experience | 10 Marks |
| 3. Personality / Suitability | 10 Marks |

The Selection of candidates will be made on the basis of the marks secured in the viva-voce. The candidates will have to secure minimum 15 marks out of 30 marks to be eligible for the selection to the respective posts.

**6. Method of Application**

The method of application shall be through online on the website https://aaharasachivalaya.karnataka.gov.in / https://kscdrc.kar.nic.in, https://kscdrc.karnataka.gov.in or
Seva Sindhu website https://sevasindhu.karnataka.gov.in

**7. Application Fee**

The candidates shall make online payment of application fee of Rs.250/- as provided in the online Application format. The Applicants who have already paid the Application Fees vide Notification No. KSC/ADM/09/2020 dtd. 11.05.2020 issued by the Karnataka State Consumer Disputes Redressal Commission, shall click on "Exempted" and the details of the earlier payment shall be mentioned.

**8. Applicants who have applied pursuant to earlier Notification bearing No. KSC/ADM/09/2020 dated 11.05.2020 issued by the Karnataka State Consumer Disputes Redressal Commission, Bengaluru, shall apply afresh to the respective post. Their Application/s pursuant to the aforesaid Notification shall not be considered.**

**9. Last date for submission of application**

**The candidates shall submit the online application and pay the application fee on or before 30.04.2021 till 11.59 p.m.**

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**10. Other Instructions**

- Candidates shall submit only one application irrespective of the posts by selecting the respective posts as provided in the Online Application. Separate Applications need not be submitted for each post.

- Applications submitted through post or by hand directly to the concerned Department / State Consumer Commission / Selection Committee shall not be considered.

- Candidates, if selected for any post, should be willing to serve in any District Consumer Disputes Redressal Commission in the State of Karnataka.

**By Order of the Selection Committee,**

**Member-Convener**
**Additional Chief Secretary to Government.**
**Food, Civil Supplies, Consumer Affairs and Legal Metrology Department,**
**Vikasa Soudha, Bengaluru**.

**PR-39**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

SUNIL GARDE Digitally signed by SUNIL GARDE Date: 2021.03.29 17:22:35 +05'30'